ಉರೂಸ್

ನೂತನವಾದಿಗಳ ದುರ್ಗಣ್ಣಿಗೆ ತುತ್ತಾದ ಕಾರ್ಯವಾಗಿದೆ ಉರೂಸ್. ಇಲ್ಲಸಲ್ಲದ ಅಂತೆ ಕಂತೆಗಳನ್ನು ಬಿತ್ತರಿಸಿ ಉರೂಸ್ ಕಾರ್ಯಕ್ರಮವು ಕಟ್ಟಾ ಶಿರ್ಕಾಗಿದೆಯೆಂದೂ, ಅದು ಖಬ್ರ್‌ರಾಧನೆಯಾಗಿದೆಯೆಂದೂ ಸ್ಥಾಪಿಸಲು ಹೆಣಗಾಡುತ್ತಿದ್ದಾರೆ. ಈ ಭರದಲ್ಲಿ ಉರೂಸ್ ಏನೆಂದೆಂಬುದನ್ನೇ ತಿಳಿಯುವ ಸೌಜನ್ಯವನ್ನಾದರೂ ಈ ವಿಭಾಗ ತೋರಿಸುದಿಲ್ಲ ಎಂಬುದು ಪರಮ ಸತ್ಯ. ಆದ್ದರಿಂದ ಉರೂಸ್ ಎಂದರೇನು? ಅದರ ತಾತ್ಪರ್ಯವೇನು ಎಂಬುದನ್ನು ಪ್ರಥಮವಾಗಿ ಜನಸಾಮಾನ್ಯರು ತಿಳಿದುಕೊಳ್ಳಬೇಕಾಗಿದೆ. ಹಾಗಿದ್ದಲ್ಲಿ ಅದರ ವಾಸ್ತವಿಕತೆಯನ್ನು ಅರಿತುಕೊಳ್ಳಬಹುದು.

ನಿಶ್ಚಿತವಾದ ಸಮಯದಲ್ಲಿ ಕೆಲವು ಸುನ್ನತ್ತಾದ ಕಾರ್ಯಕ್ರಮಗಳೊಂದಿಗೆ ಸಾಮೂಹಿಕವಾಗಿ ಝಿಯಾರತ್ ನಡೆಸುವುದಕ್ಕೆ ಉರೂಸ್ ಎಂದು ಕರೆಯಲಾಗುತ್ತದೆ. ಅಂದರೆ ಮುಖ್ಯವಾಗಿ ಇಲ್ಲಿ ಮೂರು ಕಾರ್ಯಗಳನ್ನು ಒಟ್ಟಾಗಿ ಒಂದು ನಿಶ್ಚಿತ ದಿವಸಗಳಲ್ಲಿ ನಡೆಸಲಾಗುತ್ತದೆ. ಆ ಮೂರು ಕಾರ್ಯಗಳೂ ಪ್ರವಾದಿ(ಸ)ರವರು ಕಲಿಸಿಕೊಟ್ಟ ಸುನ್ನತ್ತಾದ ಕಾರ್ಯಗಳಾಗಿವೆ.

ಇದನ್ನು ಕೆಲವೊಂದು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು. ಸುನ್ನಿಗಳೂ ಸಳಫಿಗಳು ಅಂಗೀಕರಿಸುವ ಕಾರ್ಯವಾಗಿದೆ ಮದ್ರಸಾ ಶಿಕ್ಷಣ. ಆದರೆ ಪ್ರವಾದಿ(ಸ.ಅ)ರವರ ಕಾಲದಲ್ಲಿ ಇಂದಿನ ಮಾದರಿಯಲ್ಲಿರುವ ಮದ್ರಸಾಗಳು ಇದ್ದಿರಲಿಲ್ಲ. ಅಂದರೆ ನಿಶ್ಚಿತ ತರಗತಿಗಳು, ಅದರ ಪಿರೇಡ್‌ಗಳು, ಪಠ್ಯ ಪುಸ್ತಕಗಳು, ಬೋರ್ಡ್, ಗಂಟೆ ಬಾರಿಸುವುದು, ಹಾಜರಿ ಕರೆಯುವುದು, ಪರೀಕ್ಷೆ ನಡೆಸುವುದು ಉತ್ತೀರ್ಣ–ಅನುತ್ತೀರ್ಣಗೊಳಿಸುವುದು ಮುಂತಾದ ವ್ಯವಸ್ಥೆಗಳಲ್ಲಿರುವ ಶಿಕ್ಷಣಾ ವ್ಯವಸ್ಥೆಗಳಲ್ಲಿರುವ ಶಿಕ್ಷಣ ಪದ್ಧತಿ ಪ್ರವಾದಿ(ಸ)ರವರ ಕಾಲದಲ್ಲಿರಲಿಲ್ಲ ಪ್ರವಾದಿ(ಸ)ರವರ ಕಾಲದಲ್ಲಿರಲಿಲ್ಲ.

ಈ ಎಲ್ಲಾ ರೀತಿಯಲ್ಲಿರುವ ಶಿಕ್ಷಣಾ ವ್ಯವಸ್ಥೆಗೆ ಸಾಮನ್ಯವಾಗಿ ಮದ್ರಸ ಎನ್ನಲಾಗುತ್ತದೆ. ನಿಜವಾಗಿ ಇಲ್ಲಿ ನಡೆಯುವ ವ್ಯವಸ್ಥೆಗಳೂ, ಅದರ ಹೆಸರೂ ಹೊಸತಾಗಿದೆ. ಮಾತ್ರವಲ್ಲ ಒಂದೊಂದು ಮದ್ರಸಾಕ್ಕೆ ಹಯಾತುಲ್ ಇಸ್ಲಾಂ ಮದ್ರಸಾ, ರೌಳತುಲ್ ಉಲೂಂ ಮದ್ರಸಾ ಮುಂತಾದ ಬೇರೆ ಬೇರೆ ಹೆಸರುಗಳಿಂದ ತಿಳಿಯಲ್ಪಡುತ್ತದೆ. ಆದರೆ ಅಲ್ಲಿ ನಡೆಯುವ ಸುಪ್ರಧಾನವಾದ ಕಾರ್ಯವನ್ನು ಅವಲೋಕಿಸುವಾಗ ಅದು ಪ್ರವಾದಿ(ಸ.ಅ)ರವರ ಕಾಲದಲ್ಲಿದ್ದ ಹಾಗೂ ಅವರು ಪ್ರೋತ್ಸಾವ ನೀಡಿದ ಕಾರ್ಯವೇ ಆಗಿದೆ. ಏಕೆಂದರೆ ಮದ್ರಸಾ ಶಿಕ್ಷಣದ ಮರ್ಮ ಪ್ರಧಾನವಾದ ಉದ್ದೇಶ ಇಲ್ಮ್ ಅಥವಾ ಧಾರ್ಮಿಕ ವಿದ್ಯೆ ಕಲಿಸುವದಾಗಿದೆ. ಧಾರ್ಮಿಕ ವಿದ್ಯೆ ಕಲಿಸುವುದು ಪ್ರವಾದಿ(ಸ)ರವರು ಉತ್ತೇಜನ ನೀಡಿದ ಕಾರ್ಯವೂ ಅತ್ಯಂತ ಪುಣ್ಯದಾಯಕವಾದ ಸತ್ಕರ್ಮವೂ ಆಗಿದೆ. ಇದನ್ನು ಪ್ರತಿಯೊಂದು ಕಾಲಕ್ಕೆ ಅನುಯೋಜ್ಯವಾದ ವ್ಯವಸ್ಥೆಯಲ್ಲಿ ಕಲಿಸುವುದಕ್ಕೆ ಮದ್ರಸಾ ಎಂದೂ ಕರೆಯಲಾಗುತ್ತದೆ. ಪ್ರವಾದಿ(ಸ.ಅ)ರವರು ಕಲಿಸಿದ ಒಂದು ಕಾರ್ಯವನ್ನು ನವೀನ ಮಾದರಿಯಲ್ಲಿ ನಡೆಸುವುದಕ್ಕೆ ಮದ್ರಸಾ ಎಂಬ ಹೊಸ ಹೆಸರನ್ನಿಡಲಾಗಿದೆ.

ಅದೇ ರೀತಿ ಯತೀಂ ಖಾನಗಳೂ ಪ್ರವಾದಿ(ಸ.ಅ)ರವರ ಕಾಲದಲಿದ್ದಿರಲಿಲ್ಲ. ಸಂಸ್ಥೆಯ ಅಧೀನದಲ್ಲಿ ಸಮಾಜದಲ್ಲಿರುವ ಅನಾಥ ಮಕ್ಕಳನ್ನು ಒಂದೇ ಸೂರಿನಲ್ಲಿ ಒಟ್ಟು ಸೇರಿಸಿ ಅವರಿಗೆ ಧಾರ್ಮಿಕ ಹಾಗೂ ಲೌಕಿಕ ಜ್ಞಾನವನ್ನು ನೀಡಿ ಅವರನ್ನು ಬೆಳೆಸುವ ಸಂಪ್ರದಾಯವು ಪ್ರವಾದಿ(ಸ)ರವರ ಕಾಲದಲ್ಲಿರಲಿಲ್ಲ

ಆದರೆ ಪ್ರವಾದಿ(ಸ)ರವರ ಕಾಲದಲ್ಲಿಲ್ಲದಿದ್ದರಿಂದ ಅದು ಅನಾಚಾರ(ಬಿದ್‌ಅತ್) ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಅನಾಥ ಮಕ್ಕಳನ್ನು ಪೋಷಿಸುವುದು ಹಾಗೂ ಸಂರಕ್ಷಿಸುವುದು ಅತ್ಯಂತ ಪುಣ್ಯ ಕಾರ್ಯವೆಂದು ಪ್ರವಾದಿ(ಸ.ಅ)ರವರು ಸ್ಪಷ್ಟಪಡಿಸಿದ್ದಾರೆ. ಈ ಮಾನದಂಡದಲ್ಲಿ ಯತೀಂ ಖಾನಗಳು ಸುನ್ನತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ.

ಅದೇ ರೀತಿ ದೀನೀ ಪತ್ರಿಕೆಗಳು. ಇಂದಿನ ರೀತಿಯಲ್ಲಿರುವ ವಾರಪತ್ರಿಕೆಗಳು, ಪಾಕ್ಷಿಕಗಳು, ಮಾಸಿಕಗಳು ಪ್ರವಾದಿ(ಸ)ರವರ ಕಾಲದಲ್ಲಿರಲಿಲ್ಲ. ಆದರೆ ಆ ಒಂದು ಕಾರಣದಿಂದ ಅದನ್ನು ಕೆಟ್ಟ ಬಿದ್‌ಅತ್(ಅನಾಚಾರ)ಎಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಈ ಪತ್ರಿಕೆಗಳ ಉದ್ದೇಶ ಧಾರ್ಮಿಕ ಜ್ಞಾನ ನೀಡುವು ದಾಗಿದೆ. ಆದ್ದರಿಂದ ಅದು ಸುನ್ನತ್ತಿನ ವ್ಯಾಪ್ತಿಯಲ್ಲಿ ಒಳಪಡುತ್ತದೆ.

ಒಟ್ಟಿನಲ್ಲಿ ಮದ್ರಸಾಗಳು, ಯತೀಂ ಖಾನಗಳು, ಪತ್ರಿಕೆಗಳು, .ಪ್ರವಾದಿ (ಸ.ಅ) ರವರ ಕಾಲದಲ್ಲಿಲ್ಲದಿದ್ದರೂ ಅದು ಸುನ್ನತ್ತಾದ ಸತ್ಕರ್ಮವಾಗಿದೆ. ಪ್ರವಾದಿ(ಸ.ಅ) ರವರು ಪ್ರೋತ್ಸಾಹ ನೀಡಿದ ಕಾರ್ಯವೂ ಆಗಿದೆ. ಆದರೆ ನವೀನ ಮಾದರಿಯಲ್ಲಿ ನಡೆಯುವುದರಿಂದ ಹೊಸ ಹೆಸರುಗಳನ್ನು ಇಡಲಾಗಿದೆ ಅಷ್ಟೆ.

ಅದೇ ರೀತಿ ಉರೂಸ್ ಎಂಬುದು ಇಂದಿನ ನವೀನ ಮಾದರಿಯಲ್ಲಿ ಹಾಗೂ ಶೈಲಿಯಲ್ಲಿ ಪ್ರವಾದಿ(ಸ.ಅ)ರವರ ಕಾಲದಲ್ಲಿಲ್ಲದಿದ್ದರೂ ಅದರಲ್ಲಿ ನಡೆಯುವ ಮರ್ಮ ಪ್ರಧಾನವಾದ ಕಾರ್ಯಗಳು ಪ್ರವಾದಿ(ಸ.ಅ)ರವರ ಕಾಲದಲ್ಲಿದ್ದದ್ದೂ ಅವರು ಪ್ರೋತ್ಸಾಹ ನೀಡಿದ್ದು ಆಗಿದೆ. ಏಕೆಂದರೆ ಉರೂಸ್‌ನಲ್ಲಿ ನಡೆಯುವ ಸುಪ್ರಧಾನವಾದ ಕಾರ್ಯವೇನೆಂದರೆ ಒಂದು ಸಾಮೂಹಿಕ ಝಿಯಾರತ್, ಎರಡು ಅವರಿಗಾಗಿ ಖುರ್‌ಆನ್ ಪಾರಾಯಣ ಮಾಡುವುದು, ಮೂರು ಅವರ ಹೆಸರಲ್ಲಿ ದಾನ ನೀಡುವುದು, ನಾಲ್ಕು ಮತ ಪ್ರವಚನ ನಡೆಸುವುದು, ಅವರ ಹೆಸರಿನಲ್ಲಿ ಅನ್ನದಾನ ಮಾಡುವುದು. ಇದೆಲ್ಲವೂ ಪ್ರವಾದಿ(ಸ)ರವರು ಕಲಿಸಿಕೊಟ್ಟ ಕಾರ್ಯವಾಗಿದೆ. ಆದರೆ ಇವೆಲ್ಲವುಗಳನ್ನು ಒಂದೇ ಸಮಯದಲ್ಲಿ ನವೀನ ರೀತಿಯಲ್ಲಿ ನಡೆಸುವುದಕ್ಕೆ ಉರೂಸ್ ಎಂದು ಕರೆಯಲಾಗುತ್ತದೆ. ಧಾರ್ಮಿಕ ವಿದ್ಯೆಯನ್ನು ನವೀನ ಶೈಲಿಯಲ್ಲಿ ಕಲಿಸುವ ವಿದ್ಯಾಲಯಗಳಿಗೆ ಹೊಸತಾಗಿ ಮದ್ರಸಾ ಎಂದು ಕರೆದಂತೆ ಇದಕ್ಕೆ ಉರೂಸ್ ಎಂದು ಹೆಸರಿಸಲಾಗಿದೆ ಅಷ್ಟೆ.

ಇನ್ನು ಯಾರಾದರೂ ಉರೂಸ್ ಎಂಬುದು ಪ್ರವಾದಿ(ಸ)ರವರ ಕಾಲದಲ್ಲಿತ್ತೇ ಎಂದು ಕೇಳುವುದಾದರೆ ಮದ್ರಸಾ, ಯತೀಂಖಾನ ಎಂಬುದು ಪ್ರವಾದಿ(ಸ)ರವರ ಕಾಲದಲ್ಲಿತ್ತೇ ಎಂದು ಕೇಳಬೇಕಾಗುತ್ತದೆ. ಇನ್ನು ಮದ್ರಸಾ ಎಂಬ ಹೆಸರು ಪ್ರವಾದಿ(ಸ.ಅ)ರವರ ಕಾಲದಲ್ಲಿಲ್ಲದಿದ್ದರೂ ಅಲ್ಲಿ ನಡೆಯುವ ಸುಪ್ರಧಾನವಾದ ಕಾರ್ಯ ಪ್ರವಾದಿ(ಸ.ಅ)ರವರ ಕಾಲದಲ್ಲಿತ್ತು ಎಂದು ಹೇಳುವು ದಾದರೆ ಉರೂಸ್‌ನಲ್ಲಿನಡೆಯುವ ಕಾರ್ಯವೂ ಪ್ರವಾದಿ(ಸ.ಅ)ರವರ ಕಾಲದಲ್ಲಿತ್ತು ಎಂದು ಹೇಳಬಹುದಾಗಿದೆ. ಒಟ್ಟಿನಲ್ಲಿ ಪ್ರವಾದಿ(ಸ.ಅ)ರವರು ಪ್ರೋತ್ಸಾಹ ನೀಡಿದ ಹಾಗೂ ಪ್ರವಾದಿ(ಸ.ಅ)ರವರ ಕಾಲದಲ್ಲಿದ್ದ ಕಾರ್ಯಕ್ಕೆ ಮದ್ರಸಾ ಎಂಬ ಹೊಸ ಹೆಸರನ್ನು ಆಯ್ದುಕೊಂಡಂತೆ ಪ್ರವಾದಿ(ಸ.ಅ)ರವರ ಕಾಲದಲ್ಲಿಯೇ ಇದ್ದ ಕೆಲವು ಕಾರ್ಯಗಳನ್ನು ಒಟ್ಟಾಗಿ ನಡೆಸುವುದಕ್ಕೆ ಉರೂಸ್ ಎಂಬ ಹೊಸ ಹೆಸರನ್ನು ಇಡಲಾಗಿದೆ.

ಇನ್ನು ಉರೂಸ್‌ನಲ್ಲಿ ನಡೆಯುವ ಮುಖ್ಯವಾದ ಕಾರ್ಯಗಳೇನೆಂದೂ ಅದಕ್ಕಿರುವ ಪುರಾವೆಯೇನೆಂದೂ ನೋಡೋಣ.

೧. ವಿಶೇಷವಾದ ಸಾಮೂಹಿಕ ಝಿಯಾರತ್:

ಉರೂಸ್‌ನ ವೇಳೆ ನಡೆಸುವ ಪ್ರಮುಖ ಕಾರ್ಯವಾಗಿದೆ ಝಿಯಾರತ್. ಇದು ಪ್ರವಾದಿ(ಸ)ರವರು ಸುನ್ನತ್ತಾಗಿ ಕಲಿಸಿಕೊಟ್ಟ ಕಾರ್ಯವಾಗಿದೆ. ಅದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಇದನ್ನು ನಿಶ್ಚಿತವಾದ ದಿವಸಗಳಲ್ಲಿ ನಡೆಸುವುದು ಕೂಡಾ ಪ್ರವಾದಿ ಚರ್ಯೆಯಾಗಿದೆ.

ಅಬೂ ಹುರೈರಾ(ರ)ರವರು ಹೇಳುತ್ತಾರೆ,

“ಪ್ರವಾದಿ(ಸ)ರವರು ಎಲ್ಲಾ ವರ್ಷದ ಕೊನೆಯಲ್ಲಿ ಉಹ್ದ್ ಶುಹದಾಗಳ ಖಬರ್ ಸಂದರ್ಶಿಸುತ್ತಿದ್ದರು ಹಾಗೂ ಅಸ್ಸಲಾಮು ಅಲೈಕುಂ ಬಿಮಾ ಸ್ವಬರ್ತುಂ ಫನಿಅಮ ಉಖ್ಬದ್ದಾರ್(ಅರ್ಥ: ಎಲ್ಲಾ ಕಷ್ಟಗಳನ್ನು ಸಹಿಸಿ ನಿಮ್ಮ ಶರೀರವನ್ನು ಇಸ್ಲಾಮಿಗೆ ತ್ಯಾಗ ಮಾಡಿದ ಕಾರಣಕ್ಕಾಗಿ ನಿಮ್ಮ ಮೇಲೆ ಅಲ್ಲಾಹನ ರಕ್ಷೆ ಇರಲಿ. ಪಾರತ್ರಿಕಭವನವು ಅತ್ಯುತ್ತಮ ಭವನವಾಗಿದೆ.) ಎಂದು ಪ್ರಾರ್ಥಿಸುತ್ತಿದ್ದರು. ಮಾತ್ರವಲ್ಲ ಅಬೂಬಕರ್ ಸಿದ್ದೀಕ್(ರ), ಉಮರ್(ರ) ಹಾಗೂ ಉಸ್ಮಾನ್(ರ)ರವರೂ ಹೀಗೆ ವರ್ಷದ ಕೊನೆಯಲ್ಲಿ ಅವರ ಖಬರ್ ಸಂರ್ದಶಿಸುತ್ತಿದ್ದರು.” (ಮುಸನ್ನಫ್ ಅಬ್ದಿರ್ರ ಝ್ಝಾಕ್ ೫೭೪/೩, ತಫ್ಸೀರುರ್ರಾಝೀ ೪೭/೧೯, ಇಬ್ನುಕಸೀರ್ ೫೭೧/೨, ಇಬ್ನ್ ಜರೀರ್ ೯೬/೭, ಅದ್ದುರ್ರುಲ್ ಮನ್ಸೂರ್ ೫೮/೪)

ಉಹ್ದ್ ಯುದ್ಧದಲ್ಲಿ ರಕ್ತಸಾಕ್ಷಿಯಾದ ಶುಹದಾಗಳ ಖಬರನ್ನು ಪ್ರವಾದಿ(ಸ)ರವರು ಹಾಗೂ ಖುಲಾಫಾಗಳು ಪ್ರತಿ ವರ್ಷವೂ ಸಂದರ್ಶಿಸುತ್ತಿದ್ದರೆಂದು ಈ ಹದೀಸಿನಿಂದ ಯಾವುದೇ ಸಂಶಯಕ್ಕೆ ಎಡೆಯಿಲ್ಲದೆ ರೀತಿಯಲ್ಲಿ ಸ್ಪಷ್ಟವಾಗುತ್ತದೆ. ಇದರಿಂದ ಪ್ರವಾದಿ(ಸ)ರವರು ನಿಶ್ಚಿತವಾದ ಸಮಯದಲ್ಲಿ ಝಿಯಾರತ್ ಮಾಡುತ್ತಿದ್ದರೆಂದು ಯಾವುದೇ ಅಲ್ಪಜ್ಞಾನಿಗೂ ಕೂಡಾ ತಿಳಿಯಬಹುದು. ಉರೂಸ್ ಕೂಡ ಇದುವೇ ಆಗಿದೆ. ಅಂದರೆ ನಿಶ್ಚಿತವಾದ ಸಮಯದಲ್ಲಿ ಝಿಯಾರತ್ ಮಾಡುವುದು. ಆದರೆ ಪ್ರವಾದಿ(ಸ)ರವರು ಉಹ್ದ್ ಶುಹದಾಗಳ ಉರೂಸನ್ನು ಒಂದು ವರ್ಷಕ್ಕೊಮ್ಮೆ ಆಚರಿಸಿದರೆ ಇಂದು ಕೆಲವೊಮ್ಮೆ ಎರಡು ವರ್ಷಕ್ಕೊಮ್ಮೆ ಮೂರು ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮ್ಮೆ , ಹೀಗೆ ಆಚರಿಸಲಾಗುತ್ತದೆ ಅಷ್ಟೇ. ಒಂದು ಸುನ್ನತ್ತಾದ ಕಾರ್ಯವನ್ನು ನಿಶ್ಚಿತವಾದ ದಿವಸಗಳಲ್ಲಿ ನಡೆಸಬಹುದೆಂಬುದಕ್ಕೆ ಇನ್ನೂ ಹಲವಾರು ಪುರಾವೆಗಳಿವೆ.

ಇಬ್ನು ಉಮರ್(ರ)ರವರು ಹೇಳುತ್ತಾರೆ, ಪ್ರವಾದಿ(ಸ.ಅ)ರವರು ಎಲ್ಲಾ ಶನಿವಾರವೂ ಖುಬಾ ಮಸೀದಿ ಸಂದರ್ಶಿಸುತ್ತಿದ್ದರು.(ಮುಸ್ಲಿಂ ೪೪೮/೧)

ಇದರ ವ್ಯಾಖ್ಯಾನದಲ್ಲಿ ಇಮಾಂ ನವವೀ(ರ)ರವರು ಹೇಳುತ್ತಾರೆ,

"ಸಂದರ್ಶನಕ್ಕೆ ದಿವಸಗಳನ್ನು ನಿಶ್ಚಯಿಸುವುದು ಅನುವದನೀಯ ಎಂದು ಈ ಹದೀಸಿನಲ್ಲಿದೆ." (ಶರಹ್ ಮುಸ್ಲಿಂ ೪೪೮/೧)

ಇದರಿಂದ ಝಿಯಾರತ್‌ಗಳನ್ನು ವಾರ್ಷಿಕವಾಗಿ ನಡೆಸುವುದು ಹದೀಸ್‌ಗಳ ಮೂಲಕ ಸಾಬೀತಾದ ಕಾರ್ಯವೆಂದು ಸ್ಪಷ್ಟವಾಯಿತು.

೨. ಮತ ಪ್ರವಚನ:

ಉರೂಸ್‌ನ ವೇಳೆ ನಡೆಸುವ ಇನ್ನೊಂದು ಪ್ರಮುಖ ಕಾರ್ಯವೇನೆಂದರೆ ಧಾರ್ಮಿಕ ಪ್ರವಚನಗಳು. ಇದು ಸುನ್ನತ್ ಆಗಿದೆಯೆಂಬುದಕ್ಕೆ ಪುರಾವೆ ಮಂಡಿಸುವ ಆವಶ್ಯಕತೆಯೇ ಇಲ್ಲ. ಏಕೆಂದರೆ ಮತ ಪ್ರವಚನಗಳ ಉದ್ದೇಶ ಇಲ್ಮ್ ಹೇಳಿ ಕೊಡುವುದು ಮಾತ್ರವಾಗಿದೆ. ಆದ್ದರಿಂದ ಇದನ್ನು ಯಾರಾದರೂ ವಿರೋದಿಸಬಹುದೆಂದು ನನಗೆ ಅನಿಸುತ್ತಿಲ್ಲ.

೩. ವಲಿಯ್ಯರ ಹೆಸರಿನಲ್ಲಿ ದಾನ ಮಾಡುವುದು:

ಉರೂಸಿನಲ್ಲಿ ನಡೆಸುವ ಮೂರನೇ ಮುಖ್ಯ ಕಾರ್ಯ ವಲಿಯ್ಯವರ ಹೆಸರಿನಲ್ಲಿ ಅನ್ನ ಸಂತರ್ಪಣೆ, ಸೀರಣಿ ವಿತರಣೆ ಮುಂತಾದವುಗಳ ಮೂಲಕ ದಾನ ಮಾಡುವುದು. ಇದು ಪ್ರವಾದಿ(ಸ)ರವರು ತಿಳಿಸಿದ ಸುನ್ನತ್ತಾದ ಕಾರ್ಯವಾಗಿದೆ.

ಆಇಶಾ(ರ)ರವರು ಹೇಳುತ್ತಾರೆ,

ಒಬ್ಬ ವ್ಯಕ್ತಿ ಪ್ರವಾದಿ(ಸ)ರವರಲ್ಲಿ ಕೇಳಿದರು, "ಪ್ರವಾದಿಯವರೇ, ನನ್ನ ತಾಯಿ ಅನಿರೀಕ್ಷಿತವಾಗಿ ಮರಣ ಹೊಂದಿದ್ದಾರೆ. ಅವರ ಹೆಸರಿನಲ್ಲಿ ದಾನ ಮಾಡಬಹುದೇ?" ಪ್ರವಾದಿ(ಸ)ರವರು ಹೇಳಿದರು "ಹೌದು, ಅವರ ಹೆಸರಿನಲ್ಲಿ ದಾನ ಮಾಡು" (ಬುಖಾರಿ ೩೮೭/೧, ೧೮೭/೧, ಮುಸ್ಲಿಂ ೪೧/೨, ಅಬೂದಾವೂದ್ ೪೨/೨)

ಇಬ್ನು ಅಬ್ಬಾಸ್(ರ)ರವರು ಹೇಳುತ್ತಾರೆ,

ಸಅದುಬ್ನು ಉಬಾದತ್(ರ)ರವರ ತಾಯಿ ತೀರಿದಾಗ ಸಅದ್(ರ)ರವರು ಊರಿನಲ್ಲಿರಿಲಿಲ್ಲ. ಊರಿಗೆ ಮರಳಿದ ಬಳಿಕ ಅವರು ಪ್ರವಾದಿ(ಸ)ರವರ ಬಳಿ ಬಂದು ಹೇಳಿದರು. "ಪ್ರವಾದಿಯವರೇ ನನ್ನ ತಾಯಿ ಮರಣ ಹೊಂದುವಾಗ ನಾನು ಊರಿನಲ್ಲಿರಲಿಲ್ಲ. ಅವರ ಹೆಸರಿನಲ್ಲಿ ದಾನ ಮಾಡಿದರೆ ಅವರಿಗೆ ಪ್ರಯೋಜನ ಉಂಟೇ? ಪ್ರವಾದಿ(ಸ)ರವರು ಹೇಳಿದರು, "ಹೌದು ಪ್ರಯೋಜನ ವುಂಟು." ಆಗ ಸಅದ್(ರ)ರವರು ಹೇಳಿದರು, "ಹಣ್ಣುಗಳಿರುವ ನನ್ನ ತೋಟ ವನ್ನು ಅವರ ಹೆಸರಿನಲ್ಲಿ ನಾನು ದಾನ ಮಾಡಿರುತ್ತೇನೆ." (ಬುಖಾರಿ ೩೮೭/೧)

ಅಬೂಹುರೈರಾ(ರ)ರವರು ಹೇಳುತ್ತಾರೆ,

ಒಬ್ಬರು ಪ್ರವಾದಿ(ಸ)ರವರ ಬಳಿ ಬಂದು ಹೇಳಿದರು, "ಪ್ರವಾದಿಯವರೇ ನನ್ನ ತಂದೆ ಮೃತರಾಗಿದ್ದಾರೆ. ಅವರು ಮರಣ ಹೊಂದುವಾಗ ಯಾವುದೇ ವಸಿಯ್ಯತ್ ಮಾಡಲಿಲ್ಲ. ಆದ್ದರಿಂದ ಅವರ ಹೆಸರಿನಲ್ಲಿ ದಾನ ಮಾಡಿದರೆ ಅವರ ಪಾಪಗಳು ಮನ್ನಿಸಲ್ಪಡಬಹುದೇ? ಪ್ರವಾದಿ(ಸ)ರವರು ಹೇಳಿದರು, "ಹೌದು ಮನ್ನಿಸಲ್ಪಡುವುದು" (ಮುಸ್ಲಿಂ ೪೧/೨)

ಒಮ್ಮೆ ಸಅದುಬ್‌ನು ಉಬಾದತ್(ರ)ರವರು ಹೇಳಿದರು,

“ಪ್ರವಾದಿಯವರೇ, ನನ್ನ ತಾಯಿ ಮೃತರಾಗಿದ್ದಾರೆ ಅವರ ಹೆಸರಿನಲ್ಲಿ ದಾನ ಮಾಡುವುದಾದರೆ ಯಾವುದಾಗಿದೆ ಅತ್ಯಂತ ಶ್ರೇಷ್ಟವಾದುದು?” ಪ್ರವಾದಿ(ಸ)ರವರು ಹೇಳಿದರು, “ನೀರು ಆಗಿದೆ.” ನಂತರ ಸಅದ್(ರ)ರವರು ಒಂದು ಬಾವಿ ತೋಡಿದರು ಹಾಗೂ ಇದರ ನೀರನ್ನು ಉಮ್ಮು ಸಅದ್‌ರವರ ಹೆಸರಿನಲ್ಲಿ ದಾನ ಮಾಡಿರುತ್ತೇನೆ ಎಂದು ಹೇಳಿದರು. (ಅಹ್ಮದ್, ರೂಹ್ ಪುಟ ೧೦೬)

ಇಮಾಂ ಮುಸ್ಲಿಂ ವರದಿ ಮಾಡಿದ ಹದೀಸನ್ನು ವ್ಯಾಖ್ಯಾನಿಸುತ್ತಾ ಇಮಾಂ ನವವೀ(ರ)ರವರು ಹೇಳುತ್ತಾರೆ,

“ಮರಣ ಹೊಂದಿದವರ ಹೆಸರಿನಲ್ಲಿ ದಾನ ಮಾಡುವುದು ಸುನ್ನತ್ತಾಗಿದೆ ಯೆಂದೂ, ಅದರ ಪ್ರತಿಫಲವು ಅವರಿಗೆ ಲಭಿಸುತ್ತದೆಯೆಂದೂ, ಅವರಿಗೆ ಪ್ರಯೋಜನವಿದೆಯೆಂದೂ, ಮಾತ್ರವಲ್ಲ ದಾನ ಮಾಡಿದವನಿಗೂ ಪ್ರಯೋಜನ ವಿದೆಯೆಂದೂ, ಮಾತ್ರವಲ್ಲ ದಾನ ಮಾಡಿದವನಿಗೂ ಪ್ರಯೋಜನವಿದೆಯೆಂದೂ ಈ ಹದೀಸಿನಲ್ಲಿದೆ. ಇದೆಲ್ಲವೂ ಮುಸ್ಲಿಮರು ಒಮ್ಮತವಾದ ಕಾರ್ಯವಾಗಿದೆ.” (ಶರಹ್ ಮುಸ್ಲಿಂ ೪೧/೨)

ಒಟ್ಟಿನಲ್ಲಿ ಮರಣ ಹೊಂದಿದವರ ಹೆಸರಿನಲ್ಲಿ ದಾನ ಮಾಡಬಹುದೆಂದೂ ಅದು ಪ್ರವಾದಿ(ಸ)ರವರು ಕಲಿಸಿದ ಹಾಗೂ ಮುಸ್ಲಿಮರಿಗೆ ಯಾವುದೇ ತರ್ಕ ವಿಲ್ಲದ ಕಾರ್ಯವೆಂದೂ ಸ್ಪಷ್ಟವಾಯಿತು.

ಖುರ್‌ಆನ್ ಪಾರಾಯಣ:

ಮರಣ ಹೊಂದಿದವರಿಗಾಗಿ ಅವರ ಖಬರಿನ ಬಳಿ ಖುರ್‌ಆನ್ ಪಾರಾಯಣ ಮಾಡುವುದು ಸುನ್ನತ್ತಾದ ಕಾರ್ಯವಾಗಿದೆಯೆಯೆಂಬುದರಲ್ಲಿ ಯಾವುದೇ ಒಬ್ಬ ವಿದ್ವಾಂಸನಿಗೂ ಅಭಿಪ್ರಾಯ ವ್ಯತ್ಯಾಸವಿಲ್ಲದ ಇಜ್‌ಮಾಅ ಅಥವಾ ಒಮ್ಮತಾಭಿಪ್ರಾಯದ ಮೂಲಕ ಸಾಬೀತಾದ ಕಾರ್ಯವಾಗಿದೆ.

ಬಹು ಇಮಾಂ ಸುಯೂತ್ವೀ(ರ)ರವರು ಹೇಳುತ್ತಾರೆ, "ಮರಣ ಹೊಂದಿದವರಿಗಾಗಿ ಖುರ್‌ಆನ್ ಪಾರಾಯಣ ಮಾಡುವುದು ಎಲ್ಲಾ ಕಾಲ ಹಾಗೂ ಸ್ಥಳದಲ್ಲಿ ನಡೆದು ಬಂದ ಕಾರ್ಯವಾಗಿದೆ. ಒಬ್ಬರೂ ಕೂಡ ಅದನ್ನು ವಿರೋಧಿಸಿಲ್ಲ. ಆದ್ದರಿಂದಲೇ ಅದು ಅದು ಮುಸ್ಲಿಂ ಜಗತ್ತಿನ ಇಜ್‌ಮಾಅ(ಒಮ್ಮತಾಭಿಪ್ರಾಯ)ಆಗಿದೆ. (ಮಿರ್ಖಾತ್ ೩೮೨/೨ ಶರಹುಸ್ಸುದೂರ್ ಪು:೩೧೧)

ಹದೀಸುಗಳಲ್ಲಿ.....

ಮಅಖಿಲ್ ಬಿನ್‌ಯಸಾರ್(ರ)ರವರಿಂದ ವರದಿ : ಪ್ರವಾದಿ(ಸ)ರವರು ಹೇಳುತ್ತಾರೆ "ನಿಮ್ಮಿಂದ ಮ್ರತಪಟ್ಟವರಿಗಾಗಿ ಸೂರಾಯಾಸೀನನ್ನು ಪಠಿಸಿರಿ" (ಅಹ್ಮದ್, ಅಬೂದಾವೂದ್, ಇಬ್‌ನು ಮಾಜ, ಇಬ್‌ನು ಅಬೀ ಶೈಬಾ, ನಸಾಈ, ಹಾಕಿಂ, ಇಬ್‌ನು ಹಿಬ್ಬಾನ್)

ಈ ಹದೀಸು ಸ್ವಹೀಹ್ ಆಗಿದೆಯೆಂದು ಇಮಾಂ ಖತೀಬ್ ಶಿರ್ಬೀನೀ(ರ) ತನ್ನಮುಗ್‌ನೀ ೩೨೦/೧ರಲ್ಲೂ, ಇಮಾಂ ಇಬ್‌ನು ಹಜರಿಲ್ ಹೈತಮೀ ತನ್ನ ತುಹ್ಫಾ ೯೩/೩ರಲ್ಲೂ, ಇಮಾಂ ಮಹಲ್ಲೀ ತನ್ನ ಕಂರುರ್ರಾಗಿಬೀನ್ ೩೨೧/೧ರಲ್ಲೂ ಸ್ಪಷ್ಟಪಡಿಸಿದ್ದಾರೆ.

ಅಬುದ್ದರ್‌ದಾಅ(ರ)ರವರಿಂದ ವರದಿ : ಪ್ರವಾದಿ(ಸ.ಅ)ರವರು ಹೇಳುತ್ತಾರೆ "ಯಾವುದಾದರೊಂದು ಮಯ್ಯಿತ್‌ನ ತಲೆಭಾಗದಲ್ಲಿ ಯಾಸೀನ್ ಸೂರಾ ಪಠಿಸಿದರೆ ಅಲ್ಲಾಹನು ಅವನ ಶಿಕ್ಷೆಯನ್ನು ಲಘುಗೊಳಿಸುವನು"(ಇಬ್‌ನು ಅಬಿದ್ದುನ್ಯಾ, ದ್ಯೈಲಮೀ, ಮಿಖ್ಯಾತ್ ೩೩೧/೨)

ಸಹಾಬಿಗಳ ಚರ್ಯೆ:

ನೂತನವಾದಿಗಳ ಅಂಗೀಕೃತ ನೇತಾರ ಇಬ್‌ನುಲ್ ಖಯ್ಯಿಂ ಹೇಳುವುದನ್ನು ನೋಡಿ "ತಮ್ಮಲ್ಲಿ ಯಾರಾದರೂ ಮರಣ ಹೊಂದಿದರೆ ಸ್ವಹಾಬಿಗಳು ಅವರ ಖಬರಿನ ಬಳಿ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು" (ಅರ್ರೂಹ್ ಪುಟ ೧೨)

ಬಹು। ಇಮಾಂ ನವವೀ(ರ)ರವರು ಹೇಳುತ್ತಾರೆ "ಸ್ವಹಾಬಿವರ್ಯರಾದ ಇಬ್‌ನು ಉಮರ್(ರ)ರವರು ಖಬರಿನ ಬಳಿ ಅಲ್‌ಬಖರ ಸೂರಾದ ಆರಂಭದ ಮತ್ತು ಕೊನೆಯ ಸೂಕ್ತಗಳನ್ನು ಓದುವುದು ಸುನ್ನತ್ತಾಗಿದೆಯೆಂದು ತಿಳಿಸಿದ್ದಾರೆ". (ಅಲ್ ಅದ್ಸ್‌ಕಾರ್ ಪು: ೧೬೪)

ಇಮಾಮರುಗಳ ಹೇಳಿಕೆಗಳು:

ಬಹು। ಇಮಾಂ ಅಹ್ಮದ್ ಬಿನ್ ಹಂಬಲ್(ರ)ರವರು ಹೇಳುತ್ತಾರೆ "ನೀವು ಖಬರ್ ಸಂದರ್ಶಿಸಿದರೆ ಅಲ್ಲಿ ಸೂರಾ ಫಾತಿಹಾ, ಮುಅವ್ವಿದ್ಸತ್ಯೈನ್, ಸೂರಾ ಇಕ್‌ಲಾಸ್ ಓದಿರಿ ಹಾಗೂ ಅದರ ಫಲವನ್ನು ಖಬರಿನಲ್ಲಿರುವವರಿಗೆ ಸಮರ್ಪಿಸಿರಿ" (ಶರಹುತ್ತೀಬಿ ಪುಟ ೪೧೪/೧)

ಇಮಾಂ ನವವೀ(ರ)ರವರು ಹೇಳುತ್ತಾರೆ "ಇಮಾಂ ಶಾಫಿ(ರ) ಮತ್ತು ಅವರ ಅನುಯಾಯಿಗಳು ಖಬರ್‌ನ ಬಳಿ ಖುರ್‌ಆನ್ ಪಾರಾಯಣ ಮಾಡುವುದು ಸುನ್ನತ್ತೆಂದು ತಿಳಿಸಿದ್ದಾರೆ.

ಇಮಾಂ ನವವಿ(ರ)ರವರೇ ಹೇಳುತ್ತಾರೆ "ಖಬರ್ ಸಂದರ್ಶಿಸಿದವನು ಅಲ್ಲಿ ಖುರ್‌ಆನ್ ಓದುವುದನ್ನು ಹೆಚ್ಚಿಸುವುದು ಸುನ್ನತ್ತಾಗಿದೆ".

ಇಮಾಂ ಖತೀಭ್ ಶಿರ್ಬೀನೀ(ಖು)ರವರು ಹೇಳುತ್ತಾರೆ "ಖಬರಿನ ಬಳಿ ಖುರ್‌ಆನ್ ಪಠಿಸುವುದು ಸುನ್ನತ್ತಾಗಿದೆ".

ಇಮಾಂ ರಂಲೀ(ರ)ರವರು ಹೇಳುತ್ತಾರೆ "ಖಬರಿನ ಬಳಿ ಖುರ್‌ಆನ್ ಓದುವುದು ಸುನ್ನತ್ತಾಗಿದೆ".

ಸಳಫಿಗಳ ನೇತಾರರೇ ಅಂಗೀಕರಿಸುವಾಗ.....!

ಸರ್ವ ಸಳಫಿಗಳು ತಮ್ಮ ಪ್ರೀತಿಯ ನಾಯಕನಾಗಿ ಕೊಂಡಾಡುತ್ತಿರುವ ಇಬ್ನು ತೈಮಿಯ್ಯರವರೇ ಮರಣ ಹೊಂದಿದವರಿಗಾಗಿ ಖುರ್‌ಆನ್ ಪಾರಾಯಣ ಮಾಡುವುದು ಸುನ್ನತ್ತಾಗಿದೆಯೆಂದು ಸ್ಪಷ್ಟಪಡಿಸಿದ್ದಾರೆ. ಅವರು ಹೇಳುವುದನ್ನು ನೋಡಿ "ಯಾರಾದರೂ ಅಲ್ಲಾಹನ ಪ್ರತಿಫಲ ಆಗ್ರಹಿಸಿ ಖುರ್‌ಆನ್ ಓದಿ ನಂತರ ಅದನ್ನು ಮೃತಪಟ್ಟವರಿಗೆ ಸಮರ್ಪಿಸಿದರೆ ಅದು ಅವರಿಗೆ ತಲುಪುವುದು".

ಆದ್ದರಿಂದ ಉರೂಸಿನಲ್ಲಿ ನಡೆಯುವ ಈ ಎಲ್ಲಾ ಕಾರ್ಯಗಳೂ ಸುನ್ನತ್ತಾಗಿದೆಯೆಂದು ವ್ಯಕ್ತವಾಯಿತು. ಈ ಎಲ್ಲಾ ಕಾರ್ಯಗಳಿಗೆ ಒಟ್ಟಾಗಿ ಉರೂಸ್ ಎಂದು ನಾಮಕರಣ ಮಾಡಲಾಗಿದೆಯೇ ಹೊರತು ಪ್ರವಾದಿ(ಸ)ರವರು ಕಲಿಸದ ಯಾವೊಂದು ಕಾರ್ಯವೂ ಅದರಲ್ಲಿಲ್ಲ.

ಈ ವಿವರಣೆಯಿಂದ ಉರೂಸ್ ಪ್ರವಾದಿ(ಸ)ರವರ ಕಾಲದಲ್ಲಿರಲಿಲ್ಲ, ಅದು ಅನಾಚಾರವಾಗಿದೆ ಎಂಬಿತ್ಯಾದಿ ನೂತನವಾದಿ ಸಿದ್ಧಾಂತಗಳು ಅರ್ಥಹೀನವೆಂದು ತಿಳಿದುಕೊಳ್ಳಬಹುದು. ಏಕೆಂದರೆ ಉರೂಸ್ ಪ್ರವಾದಿ(ಸ)ರವರ ಕಾಲದಲ್ಲಿರಲಿಲ

ಎಂದು ಯಾರಾದರೂ ಹೇಳುವುದಾದರೆ ಅದರ ಅರ್ಥ ಅಂದು ಝಿಯಾರತ್ ಇರಲಿಲ್ಲ, ಮೃತರ ಹೆಸರಿನಲ್ಲಿ ದಾನ ಮಾಡುವುದು ಇಲ್ಲ, ವಿದ್ಯೆ ಕಲಿಸುವುದು ಇಲ್ಲ ಎಂದಾಗಿದೆ. ಇದು ಎಷ್ಟು ಮಾತ್ರ ಅಸಂಬದ್ದವಾಗಿದೆ ಎಂದು ನೀವೇ ಚಿಂತಿಸಿ.

ಇಲ್ಲಿಯವರೆಗಿನ ವಿವರಣೆಯಿಂದ ಈ ಕಾರ್ಯಗಳು ವ್ಯಕ್ತವಾಯಿತು.

೧. ಉರೂಸ್ ಎಂದರೆ ಇಸ್ಲಾಮಿನಲ್ಲಿ ಇಲ್ಲದ ಹೊಸತಾದ ಕಾರ್ಯವಲ್ಲ. ಹೊರತು ಪ್ರವಾದಿ(ಸ)ರವರು ಕಲಿಸಿದ ಝಿಯಾರತ್, ದಾನ ನೀಡುವುದು, ಮತಪ್ರವಚನ ಮುಂತಾದವುಗಳನ್ನು ಒಟ್ಟಾಗಿ ನಡೆಸುವುದಾಗಿದೆ. ಇದಕ್ಕೆ ಉರೂಸ್ ಎಂದು ನಾಮಕರಣ ಮಾಡಲಾಗಿದೆ ಎಂದಲ್ಲದೆ ಅದರಲ್ಲಿ ಹೊಸತಾದ ಯಾವುದೇ ಕಾರ್ಯ ಅದರಲ್ಲಿಲ್ಲ.

೨. ಪ್ರವಾದಿ(ಸ)ರವರು ಉಹ್ದ್ ಶುಹದಾಗಳ ಉರೂಸ್ ನಡೆಸಿದ್ದರು.

೩. ಸುನ್ನತ್ತಾದ ಕಾರ್ಯಗಳನ್ನು ಸಮಯ ನಿಶ್ಚಯಿಸಿ ನಡೆಸುವುದು ಅನುವದನೀಯವಾಗಿದೆ.

೪. ಮರಣ ಹೊಂದಿದವರ ಹೆಸರಲ್ಲಿ ದಾನ ಮಾಡುವುದು ಶ್ರೇಷ್ಟವಾದ ಪುಣ್ಯ ಕರ್ಮವಾಗಿದೆ.

ಈ ಎಲ್ಲಾ ಪುರಾವೆಗಳಿಂದ ಖಬರಿನ ಬಳಿ ಖುರ್‌ಆನ್ ಪಾರಾಯಣ ಮಾಡುವುದು ಸುನ್ನತ್ತಾದ ಸತ್ಕರ್ಮವೆಂದು ಸ್ಪಷ್ಟವಾಯಿತು.